

ಮುಳುಗಿಸಿ ಮೀನುಗಳನ್ನು ಸುಲಭವಾಗಿ ಹಿಡಿಯುತ್ತದೆ. ಕೈಬಟ್ಟಲಿನ ಆಕಾರದ ಕಪ್ಪು ಕೊಕ್ಕೇ ಇದರ ಚೆಲುವು. ಈ ಅಗಪೆಯ ಬಾಯಿಂದ ಅಷ್ಟು ಸಲೀಸಾಗಿ ಯಾವ ಜೀವಿಯೂ ತಪ್ಪಿಸಿಕೊಳ್ಳಲಾಗದು. ಸಾವಿರಾರು ಮೈಲು ಪಯಣ ಮಾಡುವ ಪಟ್ಟೆ ತಲೆ ಹೆಬ್ಬಾತು, ಕಾಲರ್ಡ್ ಪ್ರಾಟಿನ್‌ಕೋಲ್ ಮತ್ತು ಮೀನುಭಕ್ಷಕ ಹದ್ದುವಾದ ಆಸ್ಪ್ರೇಗಳನ್ನು ಇಲ್ಲಿ ನೋಡಿದೆವು. ಪಕ್ಷಿ ಸಾಮ್ರಾಜ್ಯದ ಅತ್ಯಂತ ವೇಗದ ಪಕ್ಷಿ ಪೆರೆಗೀನ್ ಫಾಲ್ಕನ್ ಕೂಡ ಇಲ್ಲಿ ಕಾಣ ಸಿಗುತ್ತದೆ. ಈ ಫಾಲ್ಕನ್ ರಣಬೇಟೆಗಾರ ಹಕ್ಕಿ. ಇದರ ಬಾಯಿಂದ ಪಕ್ಷಿಗಳು ತಪ್ಪಿಸಿಕೊಳ್ಳುವುದು ಕಷ್ಟ. ಇದರ ವೇಗದ ದಾಳಿ ಅಷ್ಟು ಕರಾರುವಾಕ್ಕಾಗಿರುತ್ತದೆ. ಅಣೆಕಟ್ಟಿನ ಸುತ್ತಮುತ್ತ ಒಣ ಹುಲ್ಲುಗಾವಲುಗಳು, ಸಣ್ಣ ಪ್ರಮಾಣದ ಕಾಡು, ಕೆಲವು ಕಡೆ ಜೌಗು ಪ್ರದೇಶಗಳು ಇರುವುದು ಪಕ್ಷಿಗಳಿಗೆ ಮೊಟ್ಟೆ ಇಟ್ಟು ಮರಿ ಮಾಡಲು, ರಾತ್ರಿ ತಂಗಲು ಅನುಕೂಲ ಕಲ್ಪಿಸಿದೆ. ನೀರನ್ನೇ ನಂಬಿಕೊಂಡ ಮೀನುಗಳು, ರೈತರು, ಮೀನುಗಾರರು, ಪ್ರಾಣಿಗಳು, ಪಕ್ಷಿಗಳು ಎಲ್ಲರೂ ಇಲ್ಲಿ ಮೇಳೈಸುತ್ತಾರೆ. ಒಂದು ನೀರಿನಾಸರೆ ಸುತ್ತ ಹೀಗೆ ನೋಡುತ್ತಾ ಹೋದರೆ ನೂರಾರು ಕಥೆಗಳು, ಕಣ್ಣಿಗೆ ಕಾಣದ ಅನೇಕ ಸೂಕ್ಷ್ಮ ಜೀವನಗಳು ನಡೆಯುತ್ತಲೇ ಇರುತ್ತವೆ. ಇಲ್ಲಿನ ನೀರಿಗೆ, ಅದರೊಳಗಿನ ಮೀನು, ಕಪ್ಪೆ, ಏಡಿ, ಪಾಚಿ, ಸಸ್ಯಗಳಿಗೆ ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ಹಕ್ಕಿಗಳನ್ನು ಕೂಗಿ ಕರೆಸುವ ತಾಕತ್ತಿದೆ. ನಮಗ್ಯಾರಿಗೂ ಕೇಳಿಸದ ಈ ಕೊಳಲ ಕೊರಳಿನ ನಾದ ಸಾವಿರಾರು ವರ್ಷಗಳಿಂದ ಮೊಳಗುತ್ತಲೇ ಇದೆ. ಇದು ಪ್ರಕೃತಿಯ ಕಾಣದ ಕೈಗಳ ಚಮತ್ಕಾರ. ಎಂದೂ ನಿಲ್ಲದ ಜೀವಜಾಲದ ಪ್ರೇಮ ಮಮಕಾರ.

●